ಅ) ಪ್ರೌಢಶಾಲೆ ಹಾಗೂ ಪದವಿ ಪೂರ್ವ ಶಾಲೆಗಳಲ್ಲಿ ಆಡಳಿತ ಮಂಡಳಿಯವರು ನಿಯಮಾನುಸಾರ ನೇಮಕಾತಿ ಮಾಡಿಕೊಂಡಿರುವ ಬೋಧಕೇತರ ಸಿಬ್ಬಂದಿಯ ನೇಮಕಾತಿಯನ್ನು ಸಕ್ಷಮ ಪ್ರಾಧಿಕಾರವು ಅನುದಾನರಹಿತವಾಗಿ ಅನುಮೋದಿಸಿದ್ದಲ್ಲಿ ಅಂತಹ ಬೋಧಕೇತರ ಸಿಬ್ಬಂದಿಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಆ) ಪ್ರಸ್ತುತ ಜಾರಿಯಲ್ಲಿರುವ ಸಿಬ್ಬಂದಿ ಮಾದರಿಯ ರಚನೆಯಂತೆ ಪ್ರೌಢಶಾಲೆಗಳಿಗೆ ಒಂದು ದ್ವಿತೀಯ ದರ್ಜೆ ಸಹಾಯಕ ಮತ್ತು ಒಂದು ಗ್ರೂಪ್-ಡಿ ಹುದ್ದೆಗೆ ಅವಕಾಶವಿದೆ.

ಪದವಿ ಪೂರ್ವ ಕಾಲೇಜುಗಳಲ್ಲಿ ಒಂದು ಪ್ರಥಮ ದರ್ಜೆ ಸಹಾಯಕ / ದ್ವೀತಿಯ ದರ್ಜೆ ಸಹಾಯಕ ಮತ್ತ ಗ್ರೂಪ್-ಡಿ ಹುದ್ದೆಯನ್ನು ತುಂಬಲು ಅವಕಾಶವಿದೆ.

ಇ) ಹೌದು

ಈ) ಬೋಧಕೇತರ ಹುದ್ದೆಗಳು ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯ ಮೇಲೆ ನೇರ ಪರಿಣಾಮ ಬೀರುವುದಿಲ್ಲ.

ಉ) ಇಲ್ಲ, ಖಾಸಗಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಹೊಸದಾಗಿ ಸಹಾಯಾನುದಾನಕ್ಕೆ ಒಳಪಡಿಸುವ ಗ್ರೂಪ್-ಡಿ ಹುದ್ದೆಗಳಿಗೆ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವ ಕಾರಣ ಅನುದಾನಸಹಿತ ಅನುಮೋದಿಸಲಾಗುತ್ತಿಲ್ಲ. ಆರ್ಥಿಕ ಮಿತವ್ಯಯ ಆದೇಶ ಸಡಿಲಿಸಿದ ನಂತರ ಈ ಬಗ್ಗೆ ಕ್ರಮ ವಹಿಸಲಾಗುವುದು.

ಊ) ಬೋಧಕೇತರ ಹುದ್ದೆಗಳಿಗೆ ಅರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಸದರಿ ಹುದ್ದೆಗಳನ್ನು ಅನುದಾನಸಹಿತ ಅನುಮೋದಿಸಲಾಗುತ್ತಿಲ್ಲ. ದಿನಾಂಕ : 31.05.1993ರವರೆಗೆ ನೇಮಕಾತಿ ಅನುದಾನರಹಿತ ಅನುಮೋದಿಸಿರುವ ಹಾಗೂ ಅನುದಾನರಹಿತ ಅನುಮೋದನೆ ಆಗದಿರುವ ಬೋಧಕೇತರ ಸಿಬ್ಬಂದಿಯನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲಿಸಲಾಗುತ್ತಿದೆ.

ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ

835 (1078) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಪ್ರಾಥಮಿಕ ಮತ್ತ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನೌಕರರು ಸೇವೆ ಸಲ್ಲಿಸುತ್ತಿರುವಾಗ ಮೃತರಾದರೆ ಅವರ ಅವಲಂಭಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲಾಗುತ್ತಿದೆಯೇ ? (ಕಾಲೇಜುವಾರು ವಿವರ ನೀಡಿ) .

ಆ) ಉದ್ಯೋಗ ನೀಡದಿದ್ದರೆ, ಕಾರಣಗಳೇನು ?

ಇ) 2006ನೇ ಸಾಲಿಗಿಂತ ಮುಂಚಿತವಾಗಿ ಖಾಲಿ ಇರುವ ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧಕೇತರ ಸಿಬ್ಬಂದಿಯನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವುದನ್ನು ಸ್ಥಗಿತಗೊಳಿಸಲು ಕಾರಣವೇನು ?

ಈ) ಈ ನೌಕರರ ಅವಲಂಭಿತರಿಗೆ ಕೌಟುಂಬಿಕ ಜೀವನ ನಿರ್ವಹಣೆಗೆ ಸರ್ಕಾರ ಯಾವ ಭದ್ರತಾ ಕ್ರಮಗಳನ್ನು ಕೈಗೊಂಡಿದೆ (ವಿವರ ನೀಡುವುದು) ?

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ (ಪ್ರಾಥಮಿಕ ಮತ್ತ ಪ್ರೌಢ ಶಿಕ್ಷಣ ಸಚಿವರು) :

ಅ) ಅನುಕಂಪದ ಆಧಾರದ ಮೇಲೆ ಆಡಳಿತ ಮಂಡಳಿಗಳು ಮಾಡಿಕೊಂಡ ನೇಮಕಾತಿಗಳನ್ನು ಅನುಮೋದಿಸಲು ಕೋರಿ ಇಲಾಖೆಗೆ 39, ಅರ್ಜಿಗಳು ಬಂದಿವೆ. (ಕಾಲೇಜುವಾರು ವಿವರ ಲಗತ್ತಿಸಿದೆ)

ಆ) ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ನೌಕರರು ಮೃತರಾದರೆ, ಮೃತರ ಅವಲಂಬಿತರಿಗೆ ನಿಯಮಾನುಸಾರ ಉದ್ಯೋಗ ನೀಡುವುದು ಆಯಾ ಆಡಳಿತ ಮಂಡಳಿಗಳ ಜವಾಬ್ದಾರಿಯಾಗಿರುತ್ತದೆ. ಇಂತಹ ನೇಮಕಾತಿಗಳು ನಿಯಮಾನುಸಾರವಿದ್ದಲ್ಲಿ ಪರಿಶೀಲಿಸಿ, 2006 ನಿಯಮಗಳ ಸಿಬ್ಬಂದಿ ಮಾದರಿ ಪ್ರಕಾರ ಲಭ್ಯವಿದ್ದಲ್ಲಿ ಇಲಾಖೆ ಅನುಮೋದನೆ ನೀಡಲು

ಅವಕಾಶವಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 136 ಟಿಪಿಯು 199 ದಿನಾಂಕ : 09–1–10–2006 ರಂತೆ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನಿಯಮಗಳ ನಿಯಮ 21(6) ರಂತೆ ಪ್ರತಿ ಅನುದಾನಿತ ಪ್ರಥಮ ದರ್ಜೆ ಸಹಾಯಕ ಅಥವಾ 01 ದ್ವಿತೀಯ ದರ್ಜೆ ಸಹಾಯಕ ಮತ್ತು ವಿಜ್ಞಾನ ವಿಭಾಗವಿದ್ದಲ್ಲಿ 01 ಲ್ಯಾಬ್ ಅಟೆಂಡರ್ ಹುದ್ದೆಗಳನ್ನು ಮಾತ್ರ ತುಂಬಲು ಅವಕಾಶವಿದೆ. ಈ ಪರಿಮಿತಿಯಲ್ಲಿನ ಹುದ್ದೆ ಖಾಲಿ ಇದ್ದಲ್ಲಿ ಅನುಮೋದಿಸಲು ಅವಕಾಶವಿರುತ್ತವೆ. ಹುದ್ದೆಗಳು ಖಾಲಿ ಇರದ ಪ್ರಕರಣಗಳಲ್ಲಿ ಅನುಕಂಪದ ಆಧಾರದ ನೇಮಕಾತಿಗಳಿಗೆ ಅನುಮೋದನೆ ನೀಡಲಾಗುತ್ತಿಲ್ಲ.

ಇ) ಅನುಕಂಪದ ಆಧಾರದ ನೇಮಕಾತಿಗಳನ್ನು ಸರ್ಕಾರ ಸ್ಥಗಿತಗೊಳಿಸಿಲ್ಲ. ಆದರೆ, 2006ರ ನಿಯಮಗಳಂತೆ ಸಿಬ್ಬಂದಿ ಮಾದರಿ ಪ್ರಕಾರ ಹುದ್ದೆಗಳು ಲಭ್ಯವಾದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಗಳಿಗೆ ಅನುಮೋದನೆ ನೀಡಲು ಅವಕಾಶವಿದೆ.

ಉ) ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 138 ಟಿಪಿಯು 2009 ದಿನಾಂಕ : 6–1–2011ರ ಪ್ರಕಾರ ಅನುಕಂಪದ ಆಧಾರದ ಮೇಲೆ ನೇಮಕಾತಿ ಬಗ್ಗೆ ಕ್ರಮ ಜರುಗಿಸಲಾಗುವುದು.

ಅನುಬಂಧ–01

ಕ್ರ.ಸ	ಜಿಲ್ಲೆ	ತಾಲ್ಲೂಕು	ಕಾರ್ಯಜನ ಹೆಸರು ಮತ್ತು ವಿಳಾಸ	ಸಂಸ್ಥೆಯ ಹೆಸರು	ಷರಾ
01	ಧಾರವಾಡ	ಧಾರವಾಡ	ವಿದ್ಯಾರಣ್ಯ ಪದವಿ ಪೂರ್ವ ಕಾಲೇಜು, ಧಾರವಾಡ	ಕ.ಇ. ಬೋರ್ಡ್ ವಿದ್ಯಾ ಸಂಸ್ಥೆ, ಧಾರವಾಡ	01. ಗ್ರೂಪ್ "ಡಿ" ಹುದ್ದೆ
02	ಧಾರವಾಡ	ಕುಂದಗೋಳ	ಜೆ.ಎಸ್.ಎಸ್.ಪದವಿ ಪೂರ್ವ ಕಾಲೇಜು, ಯಲಿವಾಳ	ಗ್ರಾಮಾಂತರ ಶಿಕ್ಷಣ ಸಂಸ್ಥೆ, ಕುಂದಗೋಳ	01. ಗ್ರೂಪ್ "ಡಿ" ಹುದ್ದೆ
03	ಧಾರವಾಡ	ಹುಬ್ಬಳ್ಳಿ	ಎಸ್.ಎಸ್.ಕೆ. ಪದವಿ ಪೂರ್ವ ಕಾಲೇಜು, ಹುಬ್ಬಳ್ಳಿ	ತಳಜಾಭಿವೃದ್ಧಿ ಶಿಕ್ಷಣ ಸಂಸ್ಥೆ, ಹುಬ್ಬಳ್ಳಿ	01. ಗ್ರೂಪ್ "ಡಿ" ಹುದ್ದೆ
04	ಹಾವೇರಿ	ಹಾವೇರಿ	ಜಿ.ವಿ. ಹಳ್ಳೆಕೆರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಹೊಸರಿತ್ತಿ	ಗಾಂಧೀ ಗುರುಕುಲ ಗ್ರಾಮೀಣ ವಿದ್ಯುಕೇಷನ್ ಟ್ರಸ್ಟ್, ಹೊಸರಿತ್ತಿ	01. ಗ್ರೂಪ್ "ಡಿ" ಹುದ್ದೆ
05	ಬೆಂಗಳೂರು ಉತ್ತರ	ಬೆಂಗಳೂರು ಉತ್ತರ	ವಿವೇಕಾನಂದ ಪದವಿ ಪೂರ್ವ ಕಾಲೇಜು, ಮಲ್ಲೇಶ್ವರಂ	ಆಶಾ ಶಿಕ್ಷಣ ಸಂಸ್ಥೆ, ಬೆಂಗಳೂರು.	01. ದ್ವಿ.ದ.ಸ.
06	ದಾವಣಗೆರೆ	ಹೊನ್ನಾಳಿ	ಶ್ರೀ ಚನ್ನೇಶ್ವರ ಗ್ರಾಮಾಂತ್ರ ಪದವಿ ಪೂರ್ವ ಕಾಲೇಜು, ಹಿರೇಕಲ್ಮಠ	ಶ್ರೀ ಚನ್ನಪ್ಪಸ್ವಾಮಿ ವಿದ್ಯಾಸಂಸ್ಥೆ(ರಿ) ಹಿರೇಕಲ್ಮಠ,	01. ಗ್ರೂಪ್ "ಡಿ" ಹುದ್ದೆ
07	ಬೀದರ್	ಬೀದರ್	ರೇಣುಕಾ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬೀದರ್	ಆರ್.ವಿ.ಪ ವಿದ್ಯಾಸಂಸ್ಥೆ, ಬೀದರ್	01. ದ್ವಿ.ದ.ಸ.
08	ಬೀದರ್	ಬೀದರ್	ರೇಣುಕಾ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬೀದರ್	ಆರ್.ವಿ.ಪ ವಿದ್ಯಾಸಂಸ್ಥೆ, ಬೀದರ್	01. ದ್ವಿ.ದ.ಸ.
09	ಬೀದರ್	ಬೀದರ್	ರೇಣುಕಾ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬೀದರ್	ಆರ್.ವಿ.ಪ ವಿದ್ಯಾಸಂಸ್ಥೆ, ಬೀದರ್	01. ದ್ವಿದ್ವಸ
10	ಬಾಗಲಕೋಟೆ	ಬದಾಮಿ	ಎಸ್.ಎಂ. ಬಂಡಾಧಿ ಧಾಟಿ ಕಲಾ ಮತ್ತು ವಿಜ್ಞಾನ, ವಾಣಿಜ್ಯ ಕಲೇಜು, ಗುಳೇದಗುಡ್ಡ	ಪ್ರೋಗ್ರೆಸ್ಸಿನ್ ಶಿಕ್ಷಣ ಸಂಸ್ಥೆ, ಗುಳೇದಗುಡ್ಡ	01. ಗ್ರೂಪ್ "ಡಿ" ಹುದ್ದೆ
11.	ಬಾಗಲಕೋಟೆ	ಬಾಗಲಕೋಟೆ	ಶಂಕರಪ್ಪ ಜಕ್ರಿ ಪದವಿ ಪೂರ್ವ ಕಾಲೇಜು, ಬಾಗಲಕೋಟೆ	ವಿದ್ಯಾಪ್ರಸಾರಕ ಮಂಡಳ, ಬಾಗಲಕೋಟೆ	01. ಗ್ರೂಪ್ "ಡಿ" ಹುದ್ದೆ
12	ಬಿಜಾಪುರ	ಇಂಡಿ	ರೇವಪ್ಪ ಸಿದ್ದೇಶ್ವರ ಪದವಿ ಪೂರ್ವ ಕಾಲೇಜು, ಹೊರ್ತಿ,	ಬಿ.ಎಲ್.ಡಿ ಸಂಸ್ಥೆ	01. ಸಿ.ಸಿ.ಟಿ
13	ವಿಜಾಪುರ	ಬಿಜಾಪುರ	ಎಸ್.ಕೆ.ವಿ.ಎಂ.ಎಸ್. ಪದವಿ ಪೂರ್ವ ಕಾಲೇಜು,	ಬಿ.ಡಿ.ಪಿ.ಹೆಚ್. ಸಂಸ್ಥೆ	01. ಗ್ರೂಪ್ "ಡಿ" ಹುದ್ದೆ
14.	ವಿಜಾಪುರ	ಇಂಡಿ	ಆರ್.ವಿ.ಬಿ. ಪದವಿ ಪೂರ್ವ ಕಾಲೇಜು, ಅಥರ್ಗ	ಬಿ.ಎಲ್.ಡಿ ಸಂಸ್ಥೆ	01. ಗ್ರೂಪ್ "ಡಿ" ಹುದ್ದೆ

ಸಿ.ಎಸ್.ಪಿ-2010-ಧಾರವಾಡ

15	ವಿಜಾಪುರ	ವಿಜಾಪುರ	ಎಸ್.ಮಸ್.ಪದವಿ ಪೂರ್ವ ಕಾಲೇಜು, ವಿಜಾಪುರ	ಬಿ.ಎಲ್.ಡಿ ಸಂಸ್ಥೆ	01. ಗ್ರೂಪ್ "ಡಿ" ಹುದ್ದೆ 01. ದ್ವಿ.ದ.ಸ
16	ವಿಜಾಪುರ	ಮುದ್ದೇಬಿಹಾಳ	ಎ.ಬಿ.ಪತ್ತಿ ಪದವಿ ಪೂರ್ವ ಕಾಲೇಜು, ತಿಕೋಟ	ಬಿ.ಎಲ್.ಡಿ ಸಂಸ್ಥೆ	01. ಗ್ರೂಪ್ "ಡಿ" ಹುದ್ದೆ
17	ವಿಜಾಪುರ	ಇಂಡಿ	ಎಸ್.ವೈ. ಪದವಿ ಪೂರ್ವ ಕಾಲೇಜು, ಸಾಲೋಟಗಿ.	ಹೆಚ್.ಕೆ.ಇ.ಎಸ್ ಸೊಸೈಟಿ	01. ಗ್ರೂಪ್ "ಡಿ" ಹುದ್ದೆ
18	ಗುಲಬರ್ಗಾ	ಗುಲಬರ್ಗಾ	ಎಂ.ಎಸ್.ವ ಪದವಿ ಪೂರ್ವ ಕಾಲೇಜು, ಗುಲಬರ್ಗಾ	ಹೆಚ್.ಕೆ.ಇ.ಎಸ್ ಸೊಸೈಟಿ	01. ಗ್ರೂಪ್ "ಡಿ" ಹುದ್ದೆ
19	ಗುಲಬರ್ಗಾ	ಗುಲಬರ್ಗಾ	ವಿ.ಜಿ. ಮಹಿಳಾ ಪದವಿ ಪೂರ್ವ ಕಾಲೇಜು, ಗುಲಬರ್ಗಾ	ಹೆಚ್.ಕೆ.ಎಸ್. ಸಂಸ್ಥೆ	01. ದ್ವಿ.ದ.ಸ.
20	ಮಂಗಳೂರು	ಮಂಗಳೂರು	ಶ್ರೀ ಗೋಕರ್ಣನಾಥೇಶ್ವರ ಪದವಿ ಪೂರ್ವ ಕಾಲೇಜು, ಮಂಗಳೂರು	ಶ್ರೀ ವೆಂಕಟೇಶ ಶಿಬಭಕ್ತಿಯೋಗ ಸಂಘ, ಮಂಗಳೂರು	01. ಗ್ರೂಪ್ "ಡಿ" ಹುದ್ದೆ 01. ಗ್ರೂಪ್ "ಡಿ" ಹುದ್ದೆ
21	ಕೋಲಾರ	ಮುಳಬಾಗಿಲು	ನೆಹರು ಕಪಡಿ ಪದವಿ ಪೂರ್ವ ಕಾಲೇಜು, ವೈರ್ಕೂರು	ನೆಹರು ಕನಡಿ ಹೈಸ್ಕೂಲ್ ಸೊಸೈಟಿ, ವೈರ್ಕೂರು	01. ದ್ವಿ.ದ.ಸ
22	ಮೈಸೂರು	ಮೈಸೂರು	ಫಾರೂಕೀಯ ಪದವಿ ಪೂರ್ವ ಕಾಲೇಜು, ಮೈಸೂರು	ರೀಫಾ-ಹುಲ್-ಮುಸ್ಲಿಮೀನ್ ಎಜುಕೇಷನ್ ಟ್ರಸ್ಟ್, ಮೈಸೂರು	01. ದ್ವಿ.ದ.ಸ
23	ಮೈಸೂರು	ಮೈಸೂರು	ಸೈಫಿಲ್ಲೋಮಿನಾ ಪದವಿ ಪೂರ್ವ ಕಾಲೇಜು, ಮೈಸೂರು	ಮೈಸೂರ್ ಡಯೋಸಿನ್ ಎಜುಕೇಷನಲ್ ಸೊಸೈಟಿ, ಮೈಸೂರು	01. ಗ್ರೂಪ್ "ಡಿ" ಹುದ್ದೆ
24	ಚಿತ್ರದುರ್ಗ	ಹೊಳಕಾಲ್ಮೂರು	ಎಸ್.ಪಿ.ಎಸ್. ಆರ್.ಗ್ರಾಮಾಂತ್ರ ಪದವಿ ಪೂರ್ವ ಕಾಲೇಜು, ರಾಮಪುರ	ಜಟ್ಟಂಗಿ ರಾಮೇಶ್ವರ ಗ್ರಾಮಾಂತ್ರ ವಿಧ್ಯಾಭಿವೃದ್ಧಿ, ರಾಮಪುರ	01. ಗ್ರೂಪ್ "ಡಿ" ಹುದ್ದೆ
25	ಚಿತ್ರದುರ್ಗ	ಹೊಳಲ್ಕೆರೆ	ಸೋಪ್ರನಂಜಪ್ಪ ಪದವಿ ಪೂರ್ವ ಕಾಲೇಜು, ಹೊಳಲ್ಕೆರೆ	ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ, ಸಿರಿಗೆರೆ	01. ಗ್ರೂಪ್ "ಡಿ" ಹುದ್ದೆ
26	ಚಿತ್ರದುರ್ಗ	ಚಿತ್ರದುರ್ಗ	ಎಸ್.ಜೆ.ಎಂ ಪದವಿ ಪೂರ್ವ ಕಾಲೇಜು, ಚಿತ್ರದುರ್ಗ	ಎಸ್.ಜೆ.ಎಂ ವಿದ್ಯಾಪೀಠ, ಚಿತ್ರದುರ್ಗ	01. ಗ್ರೂಪ್ "ಡಿ" ಹುದ್ದೆ